**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 110/2024</u>**

**ಫಿರ್ಯಾದುದಾರರು:**

ದಿ. ಸೈಂಟ್ ಮಿಲಾಗ್ರಿಸ್ ಕ್ರೇಡಿಟ್ ಸೌಹರ್ದ ಕೊ-ಆಫ್
ಸೊಸೈಟಿ ಲಿ. ಮುಂಡಗೋಡ.

**- ವಿರುದ್ಧ -**

**ಆರೋಪಿತರು:**

ಶ್ರೀ ಪರಶುರಾಮ ಹನುಮಂತಪ್ಪ ಕಬೀರ,
ಸಾ: ಕೆಂಡಲಗೇರಿ, ಪೊಃ ನಂದಿಕಟ್ಟಾ
ತಾಃ ಮುಂಡಗೋಡ, ಉತ್ತರ ಕನ್ನಡ.

**<u>ಆಪಾದನೆ.</u>**

ಆರೋಪಿತರಾದ ನೀವು ಫಿರ್ಯಾದಿಯವರ ಬ್ಯಾಂಕಿನಿಂದ ರೂ.60,000/-ಗಳನ್ನು ದಿನಾಂಕ 6-12-2022 ರಂದು ಸಾಲವನ್ನು ಪಡೆದಿದ್ದು, ಅದರ ಮೇಲಾಗುವ 15.0% ಬಡ್ಡಿಯನ್ನು ಮರು ಪಾವತಿ ಮಾಡುವುದಾಗಿ ಸಾಲದ ಪತ್ರದ ಕರಾರಿಗೆ ಸಹಿಯನ್ನು ಹಾಕಿರುತ್ತೀರಿ. ಸದರಿ ಸಾಲವನ್ನು 36 ಕಂತುಗಳಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ. ತದನಂತರ ತಾವು ನಿಗಧಿತ ಸಮಯಕ್ಕೆ ಸದ್ರಿ ಹಣವನ್ನು ಮರು ಪಾವತಿ ಮಾಡದೇ, ಕಾಲಹರಣವನ್ನು ಮಾಡಿ ಸಮಯವನ್ನು ದೂರುತ್ತಾ ಬಂದಿರುತ್ತೀರಿ, ಕೊನೆಗೆ ಸದ್ರಿ ಸಾಲದ ಹಣವನ್ನು ಮರು ಪಾವತಿ ಮಾಡುತ್ತೇನೆಂದು ತಿಳಿಸಿ ಫಿರ್ಯಾದಿ ಶಾಖೆಗೆ ಹೋಗಿ ರೂ.50,000/- ಮೊತ್ತದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಶಾಖೆ ಹುನಗುಂದ ಇದರ ಚೆಕ್ ನಂ.036668, ದಿನಾಂಕಃ 15-03-2024 ರಂದು ನಗಧಿಸಿಕೊಳ್ಳಿ ಎಂದು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸಂಘವು ದಿನಾಂಕ 15-03-2024 ರಂದು ಸದ್ರಿ ಚೆಕ್ಕನ್ನು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಶಾಖೆ ಹುನಗುಂದಗೆ ನಗಧೀಕರಣಕ್ಕೆ ಚೆಕನ್ನು ಹಾಜರು ಪಡಿಸಿದಾಗ, ನಿಮ್ಮ ಖಾತೆಯಲ್ಲಿ "Funds Insufficient" ಎಂಬ ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರ ಸಂಘವು ದಿನಾಂಕಃ 18-03-2024 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ದಿನಾಂಕ 21-03-2024 ರಂದು

ನಿಮ್ಮಗೆ ಜಾರಿಯಾಗಿದರೂ ಸಹಿತ ಚೆಕ್ಕನ ರಕಂನ್ನು ವಾಪಸ್ಸು ಮಾಡದೆ, ಆ ಮೂಲಕ ನೀವು ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ 30–10–2025

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ